ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1409
2	ಸದಸ್ಯರ ಹೆಸರು	ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು)
3	ಉತ್ತರಿಸಬೇಕಾದ ದಿನಾಂಕ	09.03.2022
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ತುಮಕೂರು ತಾಲ್ಲೂಕು ಕೋರ ಹೊಸಹಳ್ಳಿ ಸರ್ವೆ ನಂ.79/1 ಜಮೀನಿನ ಅಳತೆ ಮಾಡಲು ಹಾಗೂ ಪಹಣಿಯ 3 ಮತ್ತು 9 ಕಾಲಂ ಸರಿಪಡಿಸುವ ಬಗ್ಗೆ ತುಮಕೂರು ಉಪವಿಭಾಗಾಧಿಕಾರಿಗಳ ಆದೇಶವಾಗಿದ್ದರೂ ಸಹ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹೌದಾದಲ್ಲಿ ಈ ಬಗ್ಗೆ ಸರ್ಕಾರ ತೆಗೆದು ಕೊಂಡ ಕ್ರಮವೇನು; ಇಲ್ಲದಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು;</td><td rowspan="3">ತುಮಕೂರು ತಾಲ್ಲೂಕು ಕೋರ ಹೋಬಳಿ ಹೊಸಹಳ್ಳಿ ಗ್ರಾಮದ ಸ.ನಂ 79/1 ಬಹುಮಾಲೀಕತ್ವದ ಪಹಣಿಯಾಗಿದ್ದು ಹಾಲಿ ಹದಿನೆಂಟು ಜನ ಹಕ್ಕುದಾರರ ಹೆಸರು ಮತ್ತು ವಿಸ್ತೀರ್ಣ ದಾಖಲಿರುತ್ತದೆ. ಸದರಿ ಸ.ನಂ. ವಿಸ್ತೀರ್ಣ ಈ ಕೆಳಕಂಡಂತೆ ನಮೂದಾಗಿರುತ್ತದೆ.

ಸ.ನಂ 79/1 ರಲ್ಲಿ ಆಕಾರಬಂದಿನಂತೆ :
<table><tr><th>ಒಟ್ಟು ವಿಸ್ತೀರ್ಣ</th><th>ಖರಾಬು ವಿಸ್ತೀರ್ಣ</th><th>ಸಾಗು ವಿಸ್ತೀರ್ಣ</th></tr><tr><td>6-36-8</td><td>1-04</td><td>5-32-8</td></tr></table>

ಆರ್.ಟಿ.ಸಿಯಂತೆ:
<table><tr><th>ಒಟ್ಟು ವಿಸ್ತೀರ್ಣ</th><th>ಖರಾಬು ವಿಸ್ತೀರ್ಣ</th><th>ಸಾಗು ವಿಸ್ತೀರ್ಣ</th><th>ಕಾಲಂ 9 ರ ವಿಸ್ತೀರ್ಣ</th></tr><tr><td>6-36-8</td><td>1-04</td><td>5-32-8</td><td>7-14-10-67</td></tr></table>

ಶ್ರೀಮತಿ ಅಲುಮೇಲಮ್ಮ ಇವರು ಸ.ನಂ 79/1 ರಲ್ಲಿ ತತ್ಕಾಲ್ ಪೋಡಿಗಾಗಿ ಮೋಜಿಣಿ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ (ಅರ್ಜಿ ಸಂಖ್ಯೆ: 18060813324247). ಆರ್.ಟಿ.ಸಿಯ ಕಾಲಂ 3 ಮತ್ತು 9 ಕ್ಕೆ ತಾಳೆ ಇಲ್ಲದ ಕಾರಣ ಪಹಣಿ ತಿದ್ದುಪಡಿಗಾಗಿ ನಿಯಮಾನುಸಾರ ತುಮಕೂರು ತಹಶೀಲ್ದಾರ್ ಕಛೇರಿಗೆ ಕಳುಹಿಸಲಾಗಿತ್ತು. ಭೂಕಂದಾಯ ಅಧಿನಿಯಮ 1964 ಕಲಂ 25 ರನ್ವಯ ಉಪವಿಭಾಗಾಧಿಕಾರಿಗಳು ನ್ಯಾಯಾಲಯದ ಪ್ರಕರಣ ಸಂಖ್ಯೆ: ಆರ್. ಆರ್. ಟಿ (ಅ) ಸಿಆರ್: 29/2015-16 ರಲ್ಲಿ ವಿಚಾರಣೆ ನಡೆಸಿ, ಸರ್ಕಾರದ ಸುತ್ತೋಲೆ ಸಂಖ್ಯೆ ಕಂ.ಇ:44/ಎಂ.ಆರ್.ಆರ್. 2014, ಬೆಂಗಳೂರು ದಿನಾಂಕ: 24-09-2019 ರಂತೆ ತಾಲ್ಲೂಕು ಸರ್ವೆಯವರಿಂದ ಸರ್ವೆ ನಕ್ಷೆ ಮತ್ತು ವರದಿ ಪಡೆದು, ಖಾತೆದಾರರ ಹೇಳಿಕೆ ಪಡೆದು ಪಹಣಿ ಕಾಲಂ 9 ರಲ್ಲಿ ಖರಾಬು ಕಡಿಮೆ ಮಾಡಿ ಪಹಣಿ ಕಾಲಂ 3 ಮತ್ತು 9 ಕ್ಕೆ ತಾಳೆ ಮಾಡಲು ತಹಶೀಲ್ದಾರ್, ತುಮಕೂರು ರವರಿಗೆ ನಿರ್ದೇಶಿಸಿ ದಿನಾಂಕ: 22/01/2020 ರಂದು ಆದೇಶಿರುತ್ತಾರೆ.</td></tr>
<tr><td>ಆ)</td><td>ತಾಲ್ಲೂಕು ಸರ್ವೆಯವರಿಂದ ಸರ್ವೆ ನಕ್ಷೆ ಮತ್ತು ವರದಿ ಪಡೆದು ಖಾತೆದಾರರ ಹೇಳಿಕೆ ಪಡೆದು ಪಹಣಿಯ 3 ಮತ್ತು 9 ಖರಾಬು ಕಡಿಮೆ ಮಾಡಿ ಪಹಣಿಯಲ್ಲಿ ಕಾಲಂ 3 ಮತ್ತು 9ಕ್ಕೆ ತಾಳೆ ಮಾಡಲು ತಹಶೀಲ್ದಾರ್ ರವರು ನಿರ್ದೇಶನ ನೀಡಿದ್ದರೂ ಕೂಡ ಜಮೀನಿನ ಅಕ್ಕಪಕ್ಕದಲ್ಲಿ ಜನ ಸಾಮಾನ್ಯರು ಓಡಾಡಲು ದಾರಿಯಿಲ್ಲದೇ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಮಾಹಿತಿ ಒದಗಿಸುವುದು;</td></tr>
<tr><td>ಇ)</td><td>ಸದರಿ ಸರ್ವೆ ಕೆಲಸ ಸರಿಪಡಿಸಲು ಇನ್ನೂ ಎಷ್ಟು ವರ್ಷಗಳು ಬೇಕಾಗಿದೆ; ಕಾಲಮಿತಿಯೊಳಗೆ ಸರಿಪಡಿಸಲಾಗು ವುದೇ; (ಸಂಪೂರ್ಣ ವಿವರ ನೀಡುವುದು)</td></tr>
</table>

		ಸದರಿ ಆದೇಶದಂತೆ ತಾಲ್ಲೂಕು ಸರ್ವೆಯವರು ಮತ್ತು ರಾಜಸ್ವನಿರೀಕ್ಷಕರು ದಿನಾಂಕ: 03-08/2020 ರಂದು ಜಂಟಿ ಸ್ಥಳ ಪರಿಶೀಲಿಸಿ ನೀಡಿರುವ ವರದಿಯಂತೆ ಸದರಿ ಸರ್ವೆ ನಂಬರಿನಲ್ಲಿ 1 ರಿಂದ 10 ರವರೆಗೆ ಸರ್ವೆ ದಾಖಲೆಗಳಲ್ಲಿ ಹಿಸ್ಸಾ ಪೋಡಿ ದುರಸ್ತಿಯಾಗಿರುತ್ತದೆ. ಚಾಲ್ತಿ ಸಾಲಿನ ಪಹಣಿದಾರರು ಹಾಲಿ ಜಮೀನಿನಲ್ಲಿ ತಮ್ಮ ಹಕ್ಕುದಾಖಲೆಯಲ್ಲಿರುವ ವಿಸ್ತೀರ್ಣಕ್ಕೆ ಅನುಗುಣವಾಗಿ ಅನುಭವಗಳನ್ನು ಹೊಂದಿರುವುದಿಲ್ಲ. ಈ ಸ.ನಂ ನಲ್ಲಿ ಸುಮಾರು ಮನೆಗಳು ನಿರ್ಮಾಣವಾಗಿರುವುದರಿಂದ ಜಮೀನು ಪಾಳು ಬಿದ್ದಿದ್ದು, ಮಧ್ಯೆ ಮಧ್ಯೆ ರಸ್ತೆಗಳನ್ನು ನಿರ್ಮಿಸಿಕೊಂಡಿರುವುದರಿಂದ ಹಾಗೂ ಹಾಲಿ ಪಹಣಿದಾರರು ಬೇರೆ ಬೇರೆ ಊರುಗಳಲ್ಲಿ ವಾಸವಾಗಿರುವುದರಿಂದ ಎಲ್ಲಾ ಹಕ್ಕುದಾರರ ಅನುಭವದ ನಕ್ಷೆ ತಯಾರಿಸಲು ಸಾಧ್ಯವಾಗಿರುವುದಿಲ್ಲ. ಸ.ನಂ. ಗೆ ಸಂಬಂಧಿಸಿದ ಮ್ಯುಟೇಷನ್‌ಗಳು ಮತ್ತು ಕೈಬರಹ ಪಹಣಿಗಳನ್ನು ಪರಿಶೀಲಿಸಿದಾಗ ಪಹಣಿಯಲ್ಲಿರುವ ವಿಸ್ತೀರ್ಣಗಳು ಮ್ಯುಟೇಷನ್ ವಿಸ್ತೀರ್ಣಕ್ಕೆ ತಾಳೆ ಇರುತ್ತದೆ. ಹಕ್ಕುದಾರರ ವಿಸ್ತೀರ್ಣ ಕಡಿಮೆ ಮಾಡಲು ಸದರಿಯವರ ಹೇಳಿಕೆ ಪಡೆಯಲು ಹೋದಾಗ ಹೇಳಿಕೆ ನೀಡಲು ನಿರಾಕರಿಸಿರುವುದರಿಂದ ಹಾಗೂ ಪಹಣಿಯ ಕಾಲಂ 9 ರಲ್ಲಿ ಖರಾಬು ಸೇರಿ 2-17-13 (ಎಕರೆ-ಗುಂಟೆ-ಆಣೆ) ವಿಸ್ತೀರ್ಣ ಹೆಚ್ಚುವರಿಯಾಗಿ ಬರುತ್ತಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ: RD 104 BHUDASA 2012 ದಿನಾಂಕ:23/06/2012 ಮತ್ತು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: PMU/MOJ/CIR-1/16-17 ದಿನಾಂಕ: 24-06-2016 ರಂತೆ ಎಲ್ಲಾ ಹಕ್ಕುದಾರರಿಗೆ ತಿಳುವಳಿಕೆ ನೀಡಿ ದಾಖಲೆಗಳೊಂದಿಗೆ ಸ್ಥಳ ಪರಿಶೀಲಿಸಿ ವಿಚಾರಣೆ ಕೈಗೊಂಡು ಪಹಣಿಯ ಕಾಲಂ 9 ರಲ್ಲಿನ ವಿಸ್ತೀರ್ಣವನ್ನು ತಿದ್ದುಪಡಿ ಮಾಡಬಹುದಾಗಿರುತ್ತದೆ. ಅದರಂತೆ ತಹಶೀಲ್ದಾರ್ ತುಮಕೂರು ರವರು ಮೇಲ್ಮನವಿ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲು ಉಪವಿಭಾಗಾಧಿಕಾರಿಗಳು ತುಮಕೂರು ಉಪವಿಭಾಗ ಇವರಿಗೆ ದಿನಾಂಕ: 24-03-2021 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಪ್ರಸ್ತುತ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಕಂಇ 59 ಎಸ್‌ಎಸ್‌ಸಿ 2022

(ಆರ್.ಅಶೋಕ)
ಕಂದಾಯ ಸಚಿವರು